ದಿನಾಂಕಃ 21-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರ ಪರಃ ಶ್ರೀ ವಿ.ಆರ್.ಪಿ. ವಕೀಲರಿಂದಃ-

ಈ ಅರ್ಜಿಯಲ್ಲಿ ನಾನು ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿದ್ದು ಅದರ ಒಕ್ಕಣೆಯನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಪ್ರಮಾಣ ಪತ್ರದ ಮೇಲೆ ಇರುವ ಸಹಿ ನನ್ನದಾಗಿದ್ದು ಅದರ ಒಕ್ಕಣೆಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿದ್ದೇನೆ.

ನನ್ನ ಮುಖ್ಯ ವಿಚಾರಣೆ ಪೂರಕವಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ನೋಡಿ ಗುರುತಿಸಿದ್ದೇನೆ.

1. ಅಪಘಾತದ ಸೂಚನಾ ಪತ್ರ ನಿಪಿ-1.
2. ಪ್ರ.ವ. ವರದಿಯ ಯಥಾ ನಕಲು ನಿಪಿ-2.
3. ದೂರಿನ ಯಥಾ ನಕಲು ನಿಪಿ-3.
4. ಅಪರಾಧ ವಿವರ ನಮೂನೆಯ ಯಥಾ ನಕಲು ನಿಪಿ-4.
5. ಅಮಾನತ್ತು ಮಹಜರ್ ನ ಯಥಾ ನಕಲು ನಿಪಿ-5.
6. ವಾಹನ ತಪಾಸಣಾ ವರದಿಯ ಯಥಾ ನಕಲು ನಿಪಿ-6.
7. ಅಂತಿಮ ದೋಷಾರೋಪಣೆ ಪತ್ರದ ಯಥಾ ನಕಲು ನಿಪಿ-7.
8. ಗಾಯದ ಪ್ರಮಾಣ ಪತ್ರದ ಯಥಾ ನಕಲು ನಿಪಿ-8.

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

ಪಿ. ಡಬ್ಲ್ಯೂಃ 1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಂ.ಎ.ಸಿ.ಟಿ., ಚಿಕ್ಕಮಗಳೂರು.

ಎಸ್ಆರ್ಃ